

ಬಹಳ ಕಾಲದ ಹಿಂದೆ ರಾಜನೊಬ್ಬನಿದ್ದ. ಅವನು ಅತ್ಯಂತ ದಕ್ಷ ಹಾಗೂ ಪ್ರಾಮಾಣಿಕ ರಾಜನಾಗಿದ್ದ. ಅವನ ಆಳ್ವಿಕೆಯಲ್ಲಿ ಪ್ರಜೆಗಳು ಸುಖವಾದ ಜೀವನ ಸಾಗಿಸುತ್ತಿದ್ದರು. ಹೀಗಿರುವಾಗ ಚಳಿಗಾಲ ಸಮೀಪಿಸಿತು. ತೀವ್ರವಾದ ಚಳಿಯಿಂದ ಪ್ರಜೆಗಳು ಬದುಕು ಸಾಗಿಸುವುದು ಕಷ್ಟವಾಯಿತು. ಇದನ್ನು ತಿಳಿದ ರಾಜ ತನ್ನ ಮಂತ್ರಿಗೆ, 'ನಿಮ್ಮ ಮನೆಗೆ ಒಂದು ಸಾವಿರ ಕಂಬಳಿಗಳನ್ನು ಕಳುಹಿಸುತ್ತೇನೆ. ಚಳಿಯಿಂದ ನಡುಗುತ್ತಿರುವ ಪ್ರಜೆಗಳಿಗೆ ಅವುಗಳನ್ನು ಸಮರ್ಪಕವಾಗಿ ವಿತರಿಸಬೇಕು' ಎಂದವನೇ ಮಂತ್ರಿಯ ಮನೆಗೆ ಸಾವಿರ ಕಂಬಳಿಗಳನ್ನು ಕಳುಹಿಸಿಕೊಟ್ಟ. ಈ ವಿಷಯವನ್ನು ತಿಳಿದುಕೊಂಡ ಕಳ್ಳನೊಬ್ಬ ಹೇಗಾದರೂ ಮಾಡಿ ಬೆಲೆ ಬಾಳುವ ಆ ಕಂಬಳಿಗಳನ್ನು ಲಪಟಾಯಿಸಬೇಕೆಂದು ತೀರ್ಮಾನಿಸಿದ.

ಅಂದು ಮಧ್ಯ ರಾತ್ರಿಯ ಸಮಯದಲ್ಲಿ ಸದ್ದಿಲ್ಲದೆ ತನ್ನ ಸಂಗಡಿಗರ ಜೊತೆಗೂಡಿ ಮಂತ್ರಿಯ ಮನೆಗೆ ನುಗ್ಗಿದ. ಆದರೆ ಅಲ್ಲಿ ಅವನು ನೋಡಿದ ದೃಶ್ಯ ಅವನ ಹೃದಯವನ್ನೇ ಕಲಕಿ ಬಿಟ್ಟಿತು. ಹಳೆಯ ಚಾಪೆಯೊಂದರ ಮೇಲೆ ಮಂತ್ರಿ ಮತ್ತು ಅವನ ಹೆಂಡತಿ ಚಳಿಯನ್ನು ತಾಳಲಾರದೆ ಮುದುಡಿ ಮಲಗಿದ್ದರು. ಅವರು ಹೊದ್ದುಕೊಂಡಿದ್ದ ಕಂಬಳಿ ಅಲ್ಲಲ್ಲಿ ಹರಿದು ಹೋಗಿತ್ತು.

ಕೂಡಲೇ ಅವನು ಅವರಿಬ್ಬರನ್ನು ಎಬ್ಬಿಸಿದ. ಮಂತ್ರಿಯನ್ನು ಕುರಿತು, 'ಸ್ವಾಮಿ, ನಾನೊಬ್ಬ ಕಳ್ಳ! ನಿಮ್ಮ ಮನೆಯಲ್ಲಿ ಬೆಲೆ ಬಾಳುವ ಕಂಬಳಿಗಳಿರುವ ವಿಷಯ ತಿಳಿದು ಅವುಗಳನ್ನು ಕದಿಯಲು ಬಂದೆ. ಆದರೆ ಇದೇನಿದು ಇಷ್ಟೊಂದು ಕಂಬಳಿಗಳಿದ್ದರೂ ಅವುಗಳನ್ನು ಮೈತುಂಬಾ ಹೊದ್ದುಕೊಂಡು ಮಲಗುವುದನ್ನು ಬಿಟ್ಟು ನೀವಿಬ್ಬರೂ ಈ ಕೊರೆಯುವ ಚಳಿಯಲ್ಲಿ ನಡುಗುತ್ತಾ ಮಲಗಿದ್ದೀರಲ್ಲಾ? ಯಾಕೆ? ಏನು ಕಾರಣ?' ಎಂದು ಕೇಳಿದ. ಹಾಗೆಯೇ ಸರಿ ರಾತ್ರಿಯಲ್ಲಿ ಅವರಿಬ್ಬರನ್ನು ಎಬ್ಬಿಸಿ ತೊಂದರೆ ಕೊಡುತ್ತಿರುವುದಕ್ಕೆ ಕ್ಷಮೆಯನ್ನೂ ಯಾಚಿಸಿದ.

ಅದಕ್ಕೆ ಮಂತ್ರಿ ನಸುನಗುತ್ತಾ, 'ಏನಿಲ್ಲ, ಈಗ ಸಹಿಸಲಾಗದ ಚಳಿಯಲ್ಲವೇ? ಪ್ರಜೆಗಳು ಚಳಿಯನ್ನು ತಾಳಲಾರದೆ ತುಂಬಾ ಅವಸ್ಥೆ ಪಡುತ್ತಿದ್ದಾರೆ. ಹಾಗಾಗಿ ನಮ್ಮ ರಾಜರು ಈ ಕಂಬಳಿಗಳನ್ನೆಲ್ಲ ಪ್ರಜೆಗಳಿಗೆ, ಬಡಬಗ್ಗರಿಗೆ ಸಮಾನವಾಗಿ ಹಂಚುವ ಜವಾಬ್ದಾರಿಯನ್ನು ನನಗೆ ವಹಿಸಿಕೊಟ್ಟಿದ್ದಾರೆ. ಇವುಗಳನ್ನು ನಾನು ನನ್ನ ಸ್ವಂತಕ್ಕೆ ಉಪಯೋಗಿಸಿಕೊಂಡರೆ ಅದು ಅಪರಾಧವಾಗುತ್ತದೆ. ಆಗ ನನ್ನನ್ನು ಸಹ ಕಳ್ಳನೆನ್ನಬೇಕಾಗುತ್ತದೆ. ಬೇರೆಯವರಿಗೆ ಸೇರಿದ ವಸ್ತುಗಳನ್ನು ನಾವು ಇಟ್ಟುಕೊಂಡು ಉಪಯೋಗಿಸಿದರೆ ಅದು ಅಧರ್ಮವಾಗುತ್ತದೆ. ನಾನು ಮೊದಲಿನಿಂದಲೂ ಸತ್ಯ, ಧರ್ಮ, ನ್ಯಾಯ, ನೀತಿ ಮತ್ತು ಪ್ರಾಮಾಣಿಕತೆಯನ್ನು ಪಾಲಿಸುತ್ತಾ ಬಂದವನು. ಹಾಗಾಗಿ ನಾನು ಅಧರ್ಮದ ಹಾದಿ ತುಳಿಯಲಾರೆ' ಎಂದನು. ಕೂಡಲೇ ಕಳ್ಳ ತನ್ನ ಅನುಚರರೊಂದಿಗೆ ಮಂತ್ರಿಯ ಕಾಲಿಗೆ ಎರಗಿ, 'ಮಂತ್ರಿಗಳೇ, ನಮ್ಮದು ಮಹಾಪರಾಧವಾಯಿತು. ದಯವಿಟ್ಟು ನಮ್ಮನ್ನು ಕ್ಷಮಿಸಿ! ಇನ್ನು ಮುಂದೆ ನಾವು ಯಾವುದೇ ಕಳ್ಳತನದ ಕೆಲಸಕ್ಕೆ ಕೈಹಾಕುವುದಿಲ್ಲ. ನಮ್ಮ ಮನೆ ದೇವರ ಮೇಲೆ ಆಣೆ ಮಾಡಿ ಹೇಳುತ್ತೇವೆ, ದಯವಿಟ್ಟು ನಮ್ಮನ್ನು ನಂಬಿ; ನಾವೂ ನ್ಯಾಯದಿಂದ ದುಡಿದು ತಿನ್ನುತ್ತೇವೆ.' ಎಂದು ಹೇಳಿದವನೇ ಸಹಚರರೊಂದಿಗೆ ಹೊರಟು ಹೋದನು.

(ಸಂಗ್ರಹ)